ಮಾನ್ಯ ಉಚ್ಛ ನ್ಯಾಯಾಲಯ, ಬೆಂಗಳೂರು, ಇಲ್ಲಿ ಶ್ರೀ ದೇವರಾಜು ಅರಸು ಎಜುಕೇಷನ್ ಟ್ರಸ್ಟ್ ದಿನಾಂಕ:12.08.2020 ರಂದು ತೆರಿಗೆ ವಿಚಾರವಾಗಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಸಂಖ್ಯೆ:4555/2021ನ್ನು ದಾಖಲಿಸಿರುತ್ತಾರೆ. ಸದರಿ ದಾವೆಯು ವಿಚಾರಣೆ ಹಂತದಲ್ಲಿರುತ್ತದೆ.

ಕರ್ನಾಟಕ ಪುರಸಭೆಗಳ ಅಧಿನಿಯಮ 1964 ರ ಸ್ವಯಂಘೋಷಿತ ಆಸ್ತಿ ತೆರಿಗೆ ನಿಯಮಗಳಂತೆ ತೆರಿಗೆ ಲೆಕ್ಕಾಚಾರ ಮಾಡಲಾಗಿ 2002-03 ನೇ ಸಾಲಿನಿಂದರಿಂದ 2020-21 ಸಾಲಿನವರೆಗೂ ಒಟ್ಟು ತೆರಿಗೆ ಮೊತ್ತ ರೂ.12,57,23,688/-ಗಳು ಬಾಕಿಯಿದ್ದು, ಅದರಲ್ಲಿ ದಿನಾಂಕ: 11.04.2017 ರಂದು ರೂ. 17,31,640/-, ದಿನಾಂಕ: 11.04.2017 ರಂದು ರೂ. 44,723/-, ದಿನಾಂಕ: 08.02.2022 ರಂದು ರೂ.3.00 ಕೋಟಿ, ದಿನಾಂಕ:24.03.2022 ರಂದು ರೂ.31,81,563/- ಮತ್ತು ದಿನಾಂಕ: 26.04.2022 ರಂದು ರೂ. 26,69,507/-ಗಳನ್ನು ಚೆಕ್ ಮೂಲಕ ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯಲ್ಲಿ ಪಾವತಿ ಮಾಡಿರುತ್ತಾರೆ(ಅನುಬಂಧ-2 ಲಗತ್ತಿಸಿದೆ). ಬಾಕಿ ತೆರಿಗೆ ಮೊತ್ತ ರೂ.8,80,96,255/- ಇರುತ್ತದೆ. ಬಾಕಿ ಮೊತ್ತದ ವಸೂಲಾತಿಗೆ ಕರ್ನಾಟಕ ಪುರಸಭೆಗಳ ಅಧಿನಿಯಮ 1964ರ ಕಲಂ 142 ರಡಿಯಲ್ಲಿ ನಿಯಮಾನುಸಾರ ಕ್ರಮವಹಿಸಲಾಗುವುದು.

ಮುಂದುವರೆದು, ಶ್ರೀ ದೇವರಾಜ ಅರಸು ಎಜುಕೇಷನ್ ಟ್ರಸ್ಟ್, ಕೋಲಾರ ರವರು ಯಾವುದೇ ಕಟ್ಟಡ ಪರವಾನಗಿಯನ್ನು ಪಡೆದುಕೊಳ್ಳದೆ ಅನಧಿಕೃತವಾಗಿ ಕಟ್ಟಡ ನಿರ್ಮಿಸುತ್ತಿರುವುದು ಕೋಲಾರ ನಗರಸಭೆ ಗಮನಕ್ಕೆ ತಿಳಿದು ಬಂದ ತಕ್ಷಣವೇ ನಗರಸಭೆಯಿಂದ ದಿನಾಂಕ:20.09.2021, 27.09.2021, 19.01.2022 ಮತ್ತು 05.02.2022 ರಂದು ಅನಧಿಕೃತವಾಗಿ ಕಟ್ಟಡ ನಿರ್ಮಿಸುತ್ತಿರುವ ಕಾಮಗಾರಿಯನ್ನು ಕೂಡಲೇ ಸ್ಥಗಿತಗೊಳಿಸಲು 1, 2, 3 ಹಾಗೂ ಅಂತಿಮ ನೋಟೀಸ್‌ಗಳನ್ನು ನೀಡಲಾಗಿರುತ್ತದೆ (ಅನುಬಂಧ-3 ಲಗತ್ತಿಸಿದೆ). ಆದರೂ ಸಹ ಸದರಿ ಸಂಸ್ಥೆಯು ಯಾವುದೇ ಉತ್ತರ ನೀಡಿರುವುದಿಲ್ಲ. ಕಟ್ಟಡ ಪರವಾನಿಗೆಯನ್ನು ಪಡೆಯದೆ ಅನಧಿಕೃತವಾಗಿ ಕಟ್ಟಡ ನಿರ್ಮಿಸುತ್ತಿರುವ ಕಾರಣ ಕರ್ನಾಟಕ ಪುರಸಭೆಗಳ ಅಧಿನಿಯಮ 1964 ರಡಿಯಲ್ಲಿ ಕ್ರಮವಹಿಸಲಾಗುತ್ತದೆ.

ಸಂಖ್ಯೆ: ನಅಇ 25 ಜಿಇಎಲ್ 2023

ಎನ್. ನಾಗರಾಜು (ಎಂ.ಟಿ.ಬಿ)
ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ
ಸಾರ್ವಜನಿಕ ವಲಯ ಉದ್ಯಮಗಳ ಸಚಿವರು.

# ನಗರಸಭಾ ಕಾರ್ಯಾಲಯ, ಕೋಲಾರ

(ಸ್ವಯಂ ಘೋಷಣಾ ಆಸ್ತಿ ತೆರಿಗೆ ಪದ್ಧತಿಗೆ ಹಣ ತುಂಬುವ ಚಲನ್

**3**

ತೆರಿಗೆ ಪಾವತಿದಾರರ ಪ್ರತಿ

ದಿ: 12 04 2017

ಬ್ಯಾಂಕಿನ ಮತ್ತು ಶಾಖೆಯ ಹೆಸರು: Karnataka Bank

ವಾರ್ಡ್ ನಂಬರ್ ಮತ್ತು ಹೆಸರು: Ward - Tamaka

ಸ್ವತ್ತಿನ ನಂ. / ಅಸೆಸ್‌ಮೆಂಟ್ ನಂ.: 916/977

ಸ್ವಯಂ ಘೋಷಣೆ ಆಸ್ತಿ ತೆರಿಗೆ ವಿವರಪಟ್ಟಿ ನಂ.: 6016

ಮಾಲೀಕನ ಹೆಸರು: President / Registrar

ವಿಳಾಸ:

ಅನುಭೋಗದಾರರ ಹೆಸರು: DO

ವಿಳಾಸ:

ಬೀದಿ ಮತ್ತು ಸ್ವತ್ತಿನ ವಿಳಾಸ: Katha NO - 916/977

ವಸತಿ / ವಸತಿಯೇತರ (✓ ಸರಿಯಾದುದನ್ನು ಗುರುತಿಸಿ)

ನಿರ್ಧರಣಾ ವರ್ಷ: 2017 - 2018

2017

| ಸಂಗ್ರಹಿಸಬೇಕಾದ ಒಟ್ಟು ಮೊತ್ತ |
|---|
| ರೂ. 44,723/- |

ಆಸ್ತಿ ತೆರಿಗೆ ರೂ. 35304/-

ಉಪಕರ / ಸೆಸ್ಸುಗಳು ರೂ. 9179/-

Sum 240/-

ಪಾವತಿ ಮಾಡಿದ ಒಟ್ಟು ಮೊತ್ತ (ಅಕ್ಷರಗಳಲ್ಲಿ): Forty four thousand seven hundred twenty three only

ನಗದು ☑ ಚೆಕ್ / ಡಿ.ಡಿ.ನಂ. 201141 ದಿ. 11/4/17

ಚೆಕ್/ಡಿ.ಡಿ. ☑ ಬ್ಯಾಂಕಿನ ಹೆಸರು: Kolar Mahendra Bk

(✓ ಸರಿಯಾದುದನ್ನು ಗುರುತಿಸಿ)

| ಖಾತೆ ಸಂಖ್ಯೆ | C/A-70501 |
|---|---|

ಹಣ ತುಂಬುವವರ ಸಹಿ

ನಗದು ಮೊತ್ತ ಮತ್ತು ಕ್ರಮ ಸಂಖ್ಯೆಯೊಂದಿಗೆ ಬ್ಯಾಂಕ್ ಅಧಿಕಾರಿಯ ಸಹಿ

EXECUTIVE ENG...
Estate Division, S.D...
Kolar-563 101

TAMAKA

Scanned By Scanner Go

# ನಗರಸಭಾ ಕಾರ್ಯಾಲಯ, ಕೋಲಾರ

ಸ್ವಯಂ ಘೋಷಣಾ ಆಸ್ತಿ ತೆರಿಗೆ ಪದ್ಧತಿಗೆ ಹಣ ತುಂಬುವ ಚಲನ್

3

**ತೆರಿಗೆ ಪಾವತಿದಾರರ ಪ್ರತಿ**

ದಿ. 12 04 2017

ಬ್ಯಾಂಕಿನ ಮತ್ತು ಶಾಖೆಯ ಹೆಸರು: Karnalaka Bank

ವಾರ್ಡ್ ನಂಬರ್ ಮತ್ತು ಹೆಸರು: Ward-1 Tamaka

ಸ್ವತ್ತಿನ ನಂ. / ಆಸ್ತಿ ಖಾತಾ ನಂ.: 159

ಸ್ವಯಂ ಘೋಷಣೆ ಆಸ್ತಿ ತೆರಿಗೆ ವಿವರಪಟ್ಟಿ ನಂ.: 6015

ಮಾಲೀಕನ ಹೆಸರು: President / Registrar

ವಿಳಾಸ:

ಅನುಭೋಗದಾರನ ಹೆಸರು: DO

ವಿಳಾಸ:

ಭೂಮಿ ಮತ್ತು ಕಟ್ಟಡದ ವಿಸ್ತೀರ್ಣ: 159 8 Arc 0 guntas

ಖಾಲಿ ನಿವೇಶನವೇ / ಕಟ್ಟಡವೇ (✓ ಸರಿಯಾದುದನ್ನು ಗುರುತಿಸಿ)

ಪಾವತಿಸುವ ವರ್ಷ: 2017 2018

ಮೂಲ ಆಸ್ತಿ ತೆರಿಗೆ ರೂ. 369024/-

ರೂ. 95948/-

ಇತರ ಸೆಸ್ಸುಗಳು: 240/- SWM

| ಸಂದಾಯವಾದ ಒಟ್ಟು ಮೊತ್ತ |
|---|
| ರೂ. 4,65,211/- |

ಸಂದಾಯ ಮಾಡಿದ ಒಟ್ಟು ಮೊತ್ತ (ಅಕ್ಷರಗಳಲ್ಲಿ): Four lakhs sixty five thousand two hundred eleven only

ನಗದು / ☑ ಚೆಕ್ / ಡಿ.ಡಿ.ನಂ.: 081065 ದಿ. 11/4/17

ಚೆಕ್/ಡಿ.ಡಿ. ☑ ಬ್ಯಾಂಕಿನ ಹೆಸರು: Kotak mahendra B/c

(✓ ಸರಿಯಾದುದನ್ನು ಗುರುತಿಸಿ)

| ಬ್ಯಾಂಕ್ ಖಾತೆ ಸಂಖ್ಯೆ | C/A-70501 |
|---|---|

ಪಾವತಿ ಸ್ವೀಕರಿಸಿದ ಮತ್ತು ಕ್ರಮ ಸಂಖ್ಯೆಯೊಂದಿಗೆ ಬ್ಯಾಂಕ್ ಅಧಿಕಾರಿ ಸಹಿ

EXECUTIVE ENGI
...State Division, S.D.
Kolar-563 101.

U.A.H.E.R. TAMAKA, KOLAR
No.

Scanned By Scanner Go

ಅನುಬಂಧ-3

# ನಗರಸಭೆ ಕಾರ್ಯಾಲಯ, ಕೋಲಾರ

ದೂರವಾಣಿ ಸಂಖ್ಯೆ : 08152-220346 ಇ-ಮೇಲ್ : itstaff_ulb_kolar@yahoomail.com
ಸಹಾಯವಾಣಿ : 08152-220007 ವೆಬ್‌ಸೈಟ್ : www.kolarcity.mrc.gov.in

ಸಂಖ್ಯೆ:ನಸಕೋ/ಕಂ.ಶಾ/ಸಿಆರ್/154/2021-22 ದಿನಾಂಕ:20.09.2021.

## ನೋಟೀಸ್

ವಿಷಯ: ಕಟ್ಟಡ ಪರವಾನಗಿ ಇಲ್ಲದೇ ಅನಧಿಕೃತವಾಗಿ ನಿರ್ಮಿಸುತ್ತಿರುವ ಕಟ್ಟಡ ಕಾಮಗಾರಿಯನ್ನು ಕೂಡಲೇ ಸ್ಥಗಿತಗೊಳಿಸಿ, ಸದರಿ ಕಟ್ಟಡಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸುವ ಕುರಿತು.

ಉಲ್ಲೇಖ: 1) ಈ ಕಾರ್ಯಾಲಯದ ಕರ ವಸೂಲಿಗಾರರು ಹಾಗೂ ಕಂದಾಯ ನಿರೀಕ್ಷಕರ ವರದಿ ದಿನಾಂಕ:20.09.2021

2) ಕರ್ನಾಟಕ ಪುರಸಭೆಗಳ ಅಧಿನಿಯಮ 1964 ರ ಕಲಂ 187 ನಿಯಮದನ್ವಯ.

---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕೋಲಾರ ನಗರದ ವಾರ್ಡ್ ನಂ:01 ರ ಟಮಕ ಪ್ರದೇಶದಲ್ಲಿ ಶ್ರೀ ದೇವರಾಜ ಎಜುಕೇಷನ್ ಟ್ರಸ್ಟ್‌ಗೆ ಸಂಬಂಧಿಸಿದಂತೆ ಉಲ್ಲೇಖ (1) ರ ವರದಿಯಂತೆ ಈ ಕಛೇರಿಯಿಂದ ಯಾವುದೇ ಅನುಮತಿ ಪಡೆಯದೆ ತಮ್ಮ ಸಂಸ್ಥೆಯ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಕಟ್ಟಡವನ್ನು ನಿರ್ಮಿಸುತ್ತಿರುವುದು ಕಂಡುಬಂದಿರುತ್ತದೆ.

ಆದುದರಿಂದ ಈ ನೋಟೀಸ್ ತಲುಪಿದ ತಕ್ಷಣ ಸದರಿ ಅನಧಿಕೃತ ಕಟ್ಟಡದ ಕಾಮಗಾರಿಯನ್ನು ಸ್ಥಗಿತಗೊಳಿಸಲು ಹಾಗೂ ಸದರಿ ಕಟ್ಟಡಕ್ಕೆ ಕಟ್ಟಡ ಪರವಾನಗಿ ಪಡೆದಿರುವ ದಾಖಲೆಗಳನ್ನು ಹಾಜರುಪಡಿಸಲು ಸೂಚಿಸಿದೆ. ತಪ್ಪಿದಲ್ಲಿ ಕರ್ನಾಟಕ ಪುರಸಭೆಗಳ ಅಧಿನಿಯಮ 1964 ರ ಕಲಂ 187 ನಿಯಮಗಳನ್ವಯ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಯುವುದು.

ಪೌರಾಯುಕ್ತರು
ನಗರಸಭೆ, ಕೋಲಾರ

ರವರಿಗೆ,

ಶ್ರೀ ದೇವರಾಜ ಅರಸು ಎಜುಕೇಷನ್ ಟ್ರಸ್ಟ್,
ವಾರ್ಡ್ ನಂ.01, ಟಮಕ
ಕೋಲಾರ.

